ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 125 (212)
ಸದಸ್ಯರ ಹೆಸರು	: ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	: 21-09-2020
ಉತ್ತರಿಸುವ ಸಚಿವರು	: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ 3 ವರ್ಷಗಳಲ್ಲಿ ಮೈಸೂರು ವಿಭಾಗದಲ್ಲಿ ಎಷ್ಟು ಪ್ರಾಥಮಿಕ ಪ್ರೌಢ ಮತ್ತು ಪದವಿ ಪೂರ್ವ ಶಾಲಾ/ಕಾಲೇಜುಗಳಿಗೆ ಅನುದಾನ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಜಿಲ್ಲೆಯ ಹೆಸರು</th><th>ಪ್ರಾಥಮಿಕ</th><th>ಪ್ರೌಢ</th><th>ಪದವಿ ಪೂರ್ವ</th></tr>
<tr><td>1</td><td>ಮೈಸೂರು</td><td>09</td><td>04</td><td>--</td></tr>
<tr><td>2</td><td>ಹಾಸನ</td><td>--</td><td>--</td><td>01</td></tr>
<tr><td>3</td><td>ಕೊಡಗು</td><td>--</td><td>--</td><td>--</td></tr>
<tr><td>4</td><td>ಉಡುಪಿ</td><td>--</td><td>--</td><td>--</td></tr>
<tr><td>5</td><td>ಮಂಗಳೂರು</td><td>--</td><td>--</td><td>--</td></tr>
<tr><td>6</td><td>ಮಂಡ್ಯ</td><td>--</td><td>02</td><td>--</td></tr>
<tr><td>7</td><td>ಚಿಕ್ಕಮಗಳೂರು</td><td>--</td><td>--</td><td>--</td></tr>
<tr><td>8</td><td>ಚಾಮರಾಜನಗರ</td><td>--</td><td>--</td><td>01</td></tr>
<tr><td></td><td>ಒಟ್ಟು</td><td>09</td><td>06</td><td>02</td></tr>
</table></td></tr>
<tr><td>ಆ.</td><td>ಅವುಗಳಲ್ಲಿ ಎಷ್ಟು ಶಾಲಾ/ಕಾಲೇಜುಗಳು ಸ್ವಂತ ಕಟ್ಟಡವನ್ನು ಹೊಂದಿವೆ:</td><td>ಈ ಪೈಕಿ 07 ಪ್ರಾಥಮಿಕ ಶಾಲೆಗಳು ಮತ್ತು 06 ಪ್ರೌಢಶಾಲೆಗಳು, 01 ಪದವಿ ಪೂರ್ವ ಕಾಲೇಜು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ.</td></tr>
<tr><td>ಇ.</td><td>ಈ ಕಾಲೇಜುಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಅನುಪಾತವನ್ನು ನಿರ್ವಹಿಸಲಾಗಿದೆಯೇ: ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಈ ಪದವಿ ಪೂರ್ವ ಕಾಲೇಜುಗಳಲ್ಲಿ ನಿಗದಿತ ಕಾರ್ಯಭಾರಕ್ಕನುಗುಣವಾಗಿ ಉಪನ್ಯಾಸಕರ ಹುದ್ದೆಗಳ ನ್ನು ಸಹಾಯಾನುದಾನದ ವ್ಯಾಪ್ತಿಗೆ ತರಲಾಗಿದೆ.
ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.
1. "ವಿಶ್ವಾಸ ಕಿರಣ" ಯೋಜನೆ:
ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷಾ ವಿಶೇಷ ಬೋಧನಾ ತರಬೇತಿ ಕಾರ್ಯಕ್ರಮ "ವಿಶ್ವಾಸ ಕಿರಣ" ಯೋಜನೆಯನ್ನು ಹಮ್ಮಿಕೊಂಡು, ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.
2. "ಲ್ಯಾಪ್‌ಟಾಪ್ ಬಹುಮಾನ ಯೋಜನೆ":
ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿರುವ</td></tr>
</table>

		ವಿದ್ಯಾರ್ಥಿಗಳನ್ನು ಲ್ಯಾಪ್‌ಟಾಪ್ ಬಹುಮಾನವನ್ನು ನೀಡುವುದರೊಂದಿಗೆ ಗೌರವಿಸಲಾಗಿದೆ. ಎಸ್.ಸಿ.ಪಿ ಯೋಜನೆಯಡಿಯಲ್ಲಿ ಜಿಲ್ಲಾವಾರು ವಿಜ್ಞಾನ ವಾಣಿಜ್ಯ ಮತ್ತು ಕಲಾ ಸಂಯೋಜನೆಗಳಲ್ಲಿ ತೇರ್ಗಡೆ ಹೊಂದಿ ಜಿಲ್ಲೆಯಲ್ಲಿ ಅತೀ ಹೆಚ್ಚು ಅಂಕಪಡೆದಂತಹ 03ವಿದ್ಯಾರ್ಥಿಗಳಿಗೆ ಹೀಗೆ ಒಟ್ಟು ರಾಜ್ಯದಾದ್ಯಂತ 288 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಟಿ.ಎಸ್.ಪಿ ಯೋಜನೆಯಡಿಯಲ್ಲಿ ಜಿಲ್ಲಾವಾರು ವಿಜ್ಞಾನ ವಾಣಿಜ್ಯ ಮತ್ತು ಕಲಾ ಸಂಯೋಜನೆಗಳಲ್ಲಿ ತೇರ್ಗಡೆ ಹೊಂದಿ ಜಿಲ್ಲೆಯಲ್ಲಿ ಅತೀ ಹೆಚ್ಚು ಅಂಕಪಡೆದಂತಹ ಒಬ್ಬ ವಿದ್ಯಾರ್ಥಿಗೆ ಹೀಗೆ ಒಟ್ಟು ರಾಜ್ಯದಾದ್ಯಂತ 96 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. 3. "ಪ್ರತಿಭಾ ಪುರಸ್ಕಾರ" ಪಿಯುಸಿಯ ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ, ಶೇಕಡ 80%ಕ್ಕಿಂತ ಹೆಚ್ಚು ಅಂಕ ಪಡೆದು ಸಿ.ಇ.ಟಿ. ಮುಖಾಂತರ ಇಂಜಿನಿಯರಿಂಗ, ವೈದ್ಯಕೀಯ, ದಂತ ವಿಜ್ಞಾನ, ಕೃಷಿ ಮತ್ತು ಪಶು ವೈದ್ಯ ವಿಜ್ಞಾನದಂತಹ ವೃತ್ತಿಪರ ಕೋರ್ಸ್‌ಗಳ ಕಾಲೇಜುಗಳಿಗೆ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ, ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ (ಬಿ.ಪಿ.ಎಲ್. ಕಾರ್ಡ್ ಹೊಂದಿರುವ) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ "ಪ್ರತಿಭಾ ಪುರಸ್ಕಾರ" ಎಂಬ ಯೋಜನೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಕೈಗೊಳ್ಳಲಾಗಿರುತ್ತದೆ. 4. "ಕನ್ನಡ ಮಾಧ್ಯಮ ಪ್ರಶಸ್ತಿ" ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ "ಕನ್ನಡ ಮಾಧ್ಯಮ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ. 5. "ಕಿತ್ತೂರು ರಾಣಿ ಚೆನ್ನಮ್ಮ" ಪುರಸ್ಕಾರ: ಪದವಿ ಪೂರ್ವ ಪರೀಕ್ಷೆಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಪಡೆದು, ಸಿ.ಇ.ಟಿ. ಮೂಲಕ ವೃತ್ತಿ ಶಿಕ್ಷಣ ಕೋರ್ಸಗಳಾದ ಇಂಜನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ಬಿ.ಎಸ್ಸಿ.(ಕೃಷಿ ವಿಜ್ಞಾನ)ಗಳಿಗೆ ಪ್ರವೇಶ ಪಡೆದ ಪ್ರತಿ ಜಿಲ್ಲೆಯಿಂದ 10 ಹೆಣ್ಣು ಮಕ್ಕಳಂತೆ ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಕುಟುಂಬದ ವಿದ್ಯಾರ್ಥಿನಿಯರು ಸಿ.ಇ.ಟಿ.ಯಲ್ಲಿ ಪಾವತಿಸಿದ ಶುಲ್ಕವನ್ನು ಮರುಪಾವತಿಸುವ "ಕಿತ್ತೂರು ರಾಣಿ ಚೆನ್ನಮ್ಮ" ಯೋಜನೆಯನ್ನು ಕಾಲೇಜು ಶಿಕ್ಷಣ ಇಲಾಖೆಯ ವತಿಯಿಂದ ಕೈಗೊಳ್ಳಲಾಗಿರುತ್ತದೆ. 6. ಪಠ್ಯಪುಸ್ತಕಗಳ ಕನ್ನಡ ಅನುವಾದ ಕಾರ್ಯಗಳು: ಪ್ರಥಮ ಮತ್ತು ದ್ವಿತೀಯ ಪಿಯುಸಿಯ ರಾಷ್ಟ್ರೀಯ ಪಠ್ಯಕ್ರಮ (ಎನ್‌ಸಿಇಆರ್‌ಟಿ)ದ ವಾಣಿಜ್ಯಶಾಸ್ತ್ರ ಮತ್ತು

ವಿಜ್ಞಾನ ವಿಷಯಗಳ ಪಠ್ಯಪುಸ್ತಕಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಾಲ ತಾಣದಲ್ಲಿ ಪ್ರಕಟಿಸುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.

7. <u>ಬುಕ್ ಬ್ಯಾಂಕ್ ಯೋಜನೆ: (ಎಸ್.ಸಿ.ಪಿ.–ಟಿ.ಎಸ್.ಪಿ ಯೋಜನೆಯಡಿ)</u>

   SCP ಹಾಗೂ TSP ಅಡಿಯಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಸಿ./ಎಸ್.ಟಿ. ಮೀಸಲಾತಿ ವಿಧಾನ ಸಭಾ ಕ್ಷೇತ್ರಗಳಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಬುಕ್ ಬ್ಯಾಂಕ್‌ಗಳಿಗೆ ವಾಣಿಜ್ಯ ವಿಭಾಗದ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡುವ ಉದ್ದೇಶದಿಂದ ಎಸ್.ಸಿ. ಮೀಸಲಾತಿ ವಿಧಾನ ಸಭಾ ಕ್ಷೇತ್ರಗಳ ಒಟ್ಟು 181 ಕಾಲೇಜುಗಳನ್ನು ಹಾಗೂ ಎಸ್.ಟಿ. ಮೀಸಲಾತಿ ವಿಧಾನ ಸಭಾ ಕ್ಷೇತ್ರಗಳ ಒಟ್ಟು 62 ಕಾಲೇಜುಗಳಲ್ಲಿ ಯಶ್ವಸಿಗೊಳಿಸಲಾಗಿದೆ.

8. <u>ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:</u>

   2018ನೇ ಸಾಲಿನ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡುವ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸಲಾಗುತ್ತಿದೆ.

9. <u>ಪರಿಹಾರ ಬೋಧನೆ:</u>

   2018–19ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ತರಗತಿಗಳಿಗೆ ದಾಖಲಾತಿ ಹೊಂದಿದ ವಿದ್ಯಾರ್ಥಿಗಳಿಗೆ ಒಂದು ಪರೀಕ್ಷೆಯನ್ನು (Pre-test) ಎಸ್.ಎಸ್.ಎಲ್.ಸಿ. ಪಠ್ಯಕ್ರಮವನ್ನು ಆಧರಿಸಿ ನಡೆಸಲಾಗುವುದು. ಈ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಗಳನ್ನು ಮಾನದಂಡ ವನ್ನಾಗಿಟ್ಟುಕೊಂಡು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ವಿಭಾಗವಾರು/ ವಿಷಯವಾರು ಗುರುತಿಸಿ, ಇಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಕಾಲೇಜಿನ ತರಗತಿಗಳು ಪ್ರಾರಂಭ ಮಾಡುವುದಕ್ಕಿಂತ ಮೊದಲು ಅಥವಾ ಕಾಲೇಜಿನ ಅವಧಿ ಮುಗಿದ ನಂತರ ಒಂದು ಗಂಟೆ ಕಾಲ 'ಸೇತುಬಂಧ ಕಾರ್ಯಕ್ರಮ'ವನ್ನು 15ನೇ ಜುಲೈವರೆಗೆ ನಡೆಸಲಾಗುವುದು. 16 ನೇ ಜುಲೈನಿಂದ ಶೈಕ್ಷಣಿಕ ವರ್ಷದ ಕೊನೆಯವರೆಗೆ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮಾತ್ರ ವಿಶೇಷ ಪರಿಹಾರ ಬೋಧನೆ (Remedial Teaching) ತರಗತಿಗಳನ್ನು ನಡೆಸಲಾಗುವುದು.

10. 2019–20ನೇ ಶೈಕ್ಷಣಿಕ ಸಾಲಿನಿಂದ Dr Ambedkar foundation, Ministry Of Social Justice And Empowerment, Government of India ಇವರ

ವತಿಯಿಂದ 2018-19 ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಮೊದಲ ಅತಿ ಹೆಚ್ಚು ಅಂಕ ಪಡೆದ ವಿಜ್ಞಾನ, ಕಲಾ,ವಾಣಿಜ್ಯ ವಿಷಯಗಳ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಸಂಬಂಧ ಒಟ್ಟು 30 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ನೀಡಲಾಗಿದೆ. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಥಮ ದ್ವಿತೀಯ ಪಿಯುಸಿ ಎಲ್ಲಾ ವಿಷಯಗಳ ಪಠ್ಯಪುಸ್ತಕ ಗಳನ್ನು ಪಿಡಿಎಫ್‌ನಲ್ಲಿ ಸಾಫ್ಟ್ ಪ್ರತಿಯನ್ನು ವಿದ್ಯಾರ್ಥಿಗಳಿಗೆ, ಉಪನ್ಯಾಸಕರುಗಳಿಗೆ ಮತ್ತು ಪೋಷಕರಿಗೆ ಅನುಕೂಲವಾಗುವಂತೆ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

11. ಪ್ರಶ್ನೆ ಕೋಠಿಗಳ ಲಭ್ಯತೆ: ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ಎಲ್ಲಾ ಪದವಿ ಪೂರ್ವ ವಿಷಯಗಳಲ್ಲಿ ಪ್ರಶ್ನೆಕೋಠಿಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರುಗಳ ಹಿತದೃಷ್ಟಿಯಿಂದ ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.
12. 2019-20ನೇ ಸಾಲಿನಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ 100 ಅಂಕಗಳಿಸಿದ ಉತ್ತಮ ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ಅನುಕೂಲ ಹಾಗೂ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್‌ನಲ್ಲಿ Scanned ಪ್ರತಿಯನ್ನು ಅಳವಡಿಸಲಾಗಿದೆ.
13. 2019-20ನೇ ಶೈಕ್ಷಣಿಕ ಸಾಲಿನಿಂದ 20 ವಿಷಯಗಳ ಉಪನ್ಯಾಸಕರಿಗೆ ವಿಷಯಾಧಾರಿತ ತರಬೇತಿಯನ್ನು ನೀಡಲಾಗಿದೆ.
14. **ದಾಖಲಾತಿ ಆಂದೋಲನ:** 2019-20ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿಯನ್ನು ಹೆಚ್ಚಿಸಲು ದಾಖಲಾತಿ ಆಂದೋಲನವನ್ನು ಹಮ್ಮಿಕೊಳ್ಳ ಲಾಗಿದೆ.
15. **ಕಾಲೇಜು ದಿನಚರಿ:**2019-20ನೇ ಶೈಕ್ಷಣಿಕ ಸಾಲಿನಿಂದ ಕಾಲೇಜು ದಿನಚರಿ ಪುಸ್ತಕಗಳನ್ನು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಿಕೆ ಮಾಡಲಾಗುವುದು.
16. **ಹೆಣ್ಣು ಮಕ್ಕಳ ಶುಲ್ಕ ವಿನಾಯಿತಿ:-** ಪದವಿ ಪೂರ್ವ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ವಿದ್ಯಾರ್ಥಿನಿಯರಿಗೆ ಶುಲ್ಕ ರಹಿತ ಉಚಿತ ಶಿಕ್ಷಣ ನೀಡಲಾಗುತ್ತಿದೆ.
17. ಈ ಕಛೇರಿಯ ಪತ್ರ ಸಂಖ್ಯೆ : ಪಪೂಶಿ/ಶೈಶಾ/ಆನ್-ಲೈನ್ ತರಗತಿ/ 2020-21 ದಿನಾಂಕ 21.02.2020 ರನ್ವಯ ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಹಿನ್ನೆಲೆಯಲ್ಲಿ ದೇಶ ಹಾಗೂ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದ ಕಾರಣ 2020-21ನೇ ಸಾಲಿನ ಶೈಕ್ಷಣಿಕ

		ಚಟುವಟಿಕೆಗಳನ್ನು ಸ್ಥಗಿತಗೊಳಿಸ ಬಾರದೆಂದು ವಿದ್ಯಾರ್ಥಿ ಗಳನ್ನು ಅವರ ಮನೆಯಲ್ಲಿಯೇ ಶೈಕ್ಷಣಿಕವಾಗಿ ಸಜ್ಜುಗೊಳಿಸುವುದು ಮತ್ತು ರಜೆಯ ದಿನಗಳಲ್ಲಿ ಸಕ್ರಿಯವಾಗಿ ಬಳಸಿಕೊಂಡು ಪಾಠ-ಪ್ರವಚನಗಳನ್ನು ಯೂಟ್ಯೂಬ್ ಮೂಲಕ ಪ್ರೀ-ರೇಕಾರ್ಡ್‌ಡ್ ವೀಡಿಯೋ ಪಾಠಗಳನ್ನು ಅಪ್‌ಲೋಡ್ ಮಾಡಲಾಗಿದೆ. ಸದರಿ ಪಾಠಗಳ ಯೂಟ್ಯೂಬ್ ಲಿಂಕ್ **https://www. youtube.com/cdpuedkpucpa** ಈ ತರಗತಿಗಳ ಸಹಾಯದಿಂದ ವಿದ್ಯಾರ್ಥಿಗಳ ಕಲಿಕೆ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲಾಗಿದೆ. ಇದು ಪ್ರೀ-ರೇಕಾರ್ಡೆಡ್ ವಿಡಿಯೋ ಆಗಿರುವುದರಿಂದ ವಿದ್ಯಾರ್ಥಿಗಳು ಸದರಿ ಲಿಂಕ್ ಬಳಸಿಕೊಂಡು ಜ್ಞಾನಾರ್ಜನೆಗಾಗಿ ಪುನರ್‌ಮನನ ಮಾಡಿಕೊಳ್ಳಲಾಗಿದೆ.

ಇಪಿ 29 ಪಿಎಂಎ 2020

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.